




ಗೋದಾವರಿ ನದಿಯ ಉದ್ದಕ್ಕೂ ಇಕ್ಕೆಲಗಳಲ್ಲಿ ಹಬ್ಬಿದ ಬೆಟ್ಟಸಾಲುಗಳಿಗೆ ತೆಲುಗಿನಲ್ಲಿ ಪಾಪಿಕೊಂಡಲು ಅನ್ನುತ್ತಾರೆ. ಈ ಬೆಟ್ಟಸಾಲುಗಳು ತೆಲಂಗಾಣದ ಖಮ್ಮಂ, ಆಂಧ್ರಪ್ರದೇಶದ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಹಬ್ಬಿವೆ. ಬೆಟ್ಟಗಳ ನಡುವೆ ಗೋದಾವರಿ ನದಿ ಬಾಗಿ ಬಳುಕಿ ಹರಿಯುತ್ತದೆ.

ಅದು ಮಾರ್ಚ್ ತಿಂಗಳ ಒಂದು ಮುಂಜಾನೆ. ಭದ್ರಾಚಲಂನಲ್ಲಿ ಶ್ರೀರಾಮನ ದರ್ಶನ ಪಡೆದು ನಾವು ಕಾರಿನಲ್ಲಿ ಹೊರಟಾಗ ಮೂಡಣವಿನ್ನೂ ಬೆಳಕಾಗಿರಲಿಲ್ಲ. ನಸುಕಿನ ಚುಮುಚುಮು ಚಳಿ ಮೈಗೆ ಹಿತವಾಗಿತ್ತು. ಅಲ್ಲಿಂದ ಎಪ್ಪತ್ತು ಕಿ.ಮೀ. ದೂರದ ಪೋಚಾವರಂ ತಲುಪಿ ಗೋದಾವರಿ ನದೀತಟದಲ್ಲಿ ಹೆಜ್ಜೆಯಿಟ್ಟಾಗ ರಾತ್ರಿಯಿಡೀ ಇಳಿದ ಮಂಜಿನ ಪರದೆ ಇನ್ನೂ ಸರಿದಿರಲಿಲ್ಲ. ನದೀ ತೀರದಲ್ಲಿ ನೀರ ಅಲೆಗಳಿಗೆ ಹೊಯ್ದಾಡುತ್ತಿದ್ದ ಯಾಂತ್ರೀಕೃತ ಬೋಟುಗಳು ನಮ್ಮನ್ನು ಸ್ವಾಗತಿಸುವಂತೆ ನಿಂತಿದ್ದವು. ಸುತ್ತಲೂ ಹಸಿರು ಹೊದ್ದ ಭೂರಮೆಯಲ್ಲಿ ಮೌನಧ್ಯಾನ. ಯಾವ ಗಲಿಬಿಲಿ, ಗೊಂದಲವಿಲ್ಲದೆ ಬಂದವರಿಗೆಲ್ಲ ಟಿಕೆಟ್ ನೀಡಿ ಯಾಂತ್ರೀಕೃತ ದೋಣಿಗಳಿಗೆ ನಮ್ಮನ್ನು ಹತ್ತಿಸಿದಾಗ ಗಂಟೆ ಹತ್ತು. ಅಲ್ಲಿಂದ ಮುಂದೆ ನೀರ ಮೇಲೆ ಸಂಜೆ ಐದು ಗಂಟೆಯವರೆಗೆ ನಮ್ಮ ನಿರಂತರ ಪಯಣ. ತಿಂಡಿ, ಊಟ ಎಲ್ಲ ಅಲ್ಲಿಯೇ.

ಹತ್ತಿದ ಸ್ಥಳವನ್ನು ಹಿಂದಿಕ್ಕಿ ನದಿಯಲ್ಲಿ ಮುಂದೆ ಸಾಗುತ್ತಿದ್ದಂತೆ ಸುತ್ತಲೂ ಪ್ರಕೃತಿಯ ರಮ್ಯ ಚೆಲುವು ತೆರೆದುಕೊಳ್ಳತೊಡಗಿತು. ಇಕ್ಕೆಲಗಳಲ್ಲಿ ಆಗಸದೆತ್ತರಕ್ಕೆ ಒಂದರ ಹಿಂದೆ ಒಂದರಂತೆ ಮಲೆತುನಿಂತ ಅಸಂಖ್ಯ ಹಸಿರ ಬೆಟ್ಟಸಾಲುಗಳು, ನಡುವೆ ಹರಿಯುವ ನದಿ, ಉಸುಕಿನ ತೀರಗಳು, ಅಲ್ಲೊಂದು ಇಲ್ಲೊಂದು ಕಣ್ಣಿಗೆ ಬೀಳುವ ಗಿರಿಜನರ ಹಾಡಿಗಳು, ಸಣ್ಣ ದೋಣಿಗಳಲ್ಲಿ ಸಾಗುವ ಗಿರಿಜನರು ಎಲ್ಲವೂ ಚಿತ್ರಕಲಾವಿದನೊಬ್ಬನ ಕುಂಚಕ್ಕೆ ದಕ್ಕಿದ ಚಿತ್ರಪಟಗಳಂತೆ ಕಾಣತೊಡಗಿದವು. ಇವೆಲ್ಲವನ್ನೂ ಬಿಡದೆ ಕಣ್ಣಲ್ಲಿ ತುಂಬಿಕೊಳ್ಳುವ ತವಕ ನಮಗೆ. ಕ್ಯಾಮೆರಾದಲ್ಲಿ ಸೆರೆಸಿಕ್ಕ ದೃಶ್ಯಗಳೆಲ್ಲವನ್ನು ಕ್ಲಿಕ್ಕಿಸಿದರೂ ತೃಪ್ತಿಯಿಲ್ಲ. ಮುಂದೆ ನೋಡುತ್ತಿದ್ದಂತೆ ಬೆಟ್ಟವೆರಡರ ನಡುವೆ ನದಿ ಮಾಯವಾದಂತೆ ಭಾಸ. ಆದರೆ ಸಮೀಪ ಸರಿದಂತೆ ಗೋದಾವರಿ ಅಲ್ಲಿ ತಿರುವು ಪಡೆದದ್ದು ಕಂಡಿತು.

ನೀರ ಹಾದಿಯ ಮಧ್ಯೆ ಸಿಗುವ ಪೇರಂಟಲಪಲ್ಲಿಯಲ್ಲಿ ಇಳಿದರೆ ಶಿವನ ದರ್ಶನದ ಜೊತೆಗೆ ಸಣ್ಣ ನೀರತೊರೆಯ ಹರಿವನ್ನು ಆನಂದಿಸಬಹುದು. ಇಲ್ಲಿ ಗಿರಿಜನರು ತಮ್ಮ ಕೈಯಿಂದ ತಯಾರಿಸಿದ ಬಿದಿರಿನ ಅಲಂಕಾರಿಕ ವಸ್ತುಗಳು ಕೊಳ್ಳಲು ಸಿಗುತ್ತವೆ. ಬೆಟ್ಟಗಳ ತಪ್ಪಲಿನಲ್ಲಿ, ಕಾಡಿನ ನಡುವೆ ಬದುಕು ಕಟ್ಟಿಕೊಂಡ ಇಲ್ಲಿನ ಗಿರಿಜನರು ನಾಗರಿಕ ಸಂಪರ್ಕದಿಂದ ಬಹಳ ದೂರ ಉಳಿದಿದ್ದಾರೆ. ರಸ್ತೆ, ವಿದ್ಯುತ್, ಕುಡಿಯುವ ನೀರು, ದಿನನಿತ್ಯದ ಜೀವನಕ್ಕೆ ಒದಗುವ ದಿನಸಿ ಅಂಗಡಿಗಳು, ದೂರವಾಣಿ, ಚರವಾಣಿ ಇವರ ಹಾಡಿಗಳಲ್ಲಿ ಇನ್ನೂ ಪ್ರವೇಶ ಪಡೆದಿಲ್ಲ. ಇಲ್ಲಿನ ಬೆಟ್ಟಗುಡ್ಡಗಳ ದಟ್ಟ ಕಾಡಿನಲ್ಲಿ ಹೆಜ್ಜೆ ಹಾಕಿದಾಗ ನಾವು ಬೇರೆಯದೇ ಆದ ಪ್ರಪಂಚಕ್ಕೆ ಕಾಲಿಟ್ಟಂತೆ ಭಾಸವಾಗುತ್ತದೆ. ಔಷಧೀಯ ಸಸ್ಯಗಳಿಂದ, ಬೆಲೆಬಾಳುವ ತೇಗ, ರಕ್ತಚಂದನದಂತಹ ಮರಮಟ್ಟುಗಳಿಂದ ಇಲ್ಲಿನ ಕಾಡುಗಳು ಸಂಪದ್ಭರಿತವಾಗಿವೆ. ವಿಶಿಷ್ಟ ಜಾತಿಯ ವನ್ಯಜೀವಿಗಳಿಗೂ ಆಶ್ರಯತಾಣವಾಗಿದೆ.

ಒಂದು ಹಂತದವರೆಗೆ ಸಾಗಿ ಹಿಂತಿರುಗುವ ಹಾದಿಯಲ್ಲಿ ಕೊಲ್ಲೂರು ಸಿಗುತ್ತದೆ. ಅಲ್ಲಿ ಮರಳದಂಡೆಯಲ್ಲಿ ಮಧ್ಯಾಹ್ನದ ಊಟ. ಮಾಂಸಹಾರಿಗಳಿಗೆ ಇಲ್ಲಿ ಬಿದಿರವಾಟೆಯಲ್ಲಿ ಸುಟ್ಟ ಕೋಳಿಯ ಮಸಾಲಾಮಾಂಸ (**Bamboo Chicken**) ಸಿಗುತ್ತದೆ. ಇಷ್ಟವಿದ್ದವರು ಕೊಂಡು ಸವಿಯಬಹುದು. ರಾತ್ರಿ ಉಳಿಯುವವರಿಗೆ ಕೊಲ್ಲೂರಿನಲ್ಲಿ ಬಿದಿರ ಕುಟೀರಗಳ ವ್ಯವಸ್ಥೆಯಿದೆ. ಸುತ್ತ ದಟ್ಟಕಾಡು, ಬೆಟ್ಟಗುಡ್ಡಗಳ ಮಧ್ಯೆ ಆಕಾಶದಲ್ಲಿ ಹೊಳೆಯುವ ತಾರೆಗಳ ಕೆಳಗೆ ನೈಜನೀರವತೆಯನ್ನು ಇಲ್ಲಿದ್ದು ಅನುಭವಿಸಬಹುದು.

ಊಟದ ನಂತರ ನಮ್ಮ ಪಯಣ ಹೊರಟಲ್ಲಿಗೆ ಹಿಂತಿರುಗಿತು. ಆಗ ಧುತ್ತನೆ ಪ್ರತ್ಯಕ್ಷರಾದ ನಾಲ್ವರು ಹುಡುಗರು ಹಿಮ್ಮೇಳದ ಸಂಗೀತಕ್ಕೆ ತಕ್ಕಂತೆ ಹಾಡಿ, ಕುಣಿದು, ನಟನೆ ಮಾಡುವುದರ ಜೊತೆಗೆ ನಮ್ಮನ್ನೂ ಕುಣಿಸಿ, ನಾಟಕ ಮಾಡಿಸಿ ಯಾರಿಗೂ ಬೇಸರ ಬಾರದಂತೆ ಮನರಂಜನೆ ನೀಡಿದರು. ನಮ್ಮಂತಹವರು ಕೊಟ್ಟ ಅಷ್ಟಿಷ್ಟು ಹಣದಿಂದ ಅವರು ಕಾಲೇಜು ಕಲಿಯುತ್ತಿದ್ದಾರೆ ಅನ್ನುವ ಸತ್ಯ ಬಯಲಾದಾಗ ಮಾತ್ರ ಮನಸ್ಸಿಗೆ ನೋವಾಯಿತು. ಅಷ್ಟರಲ್ಲಿ ನಾವು ಹೊರಟಲ್ಲಿಗೆ ಬಂದು ತಲುಪಿದ್ದೆವು.

ಗೋದಾವರಿ ನದಿಗೆ ಅಡ್ಡಲಾಗಿ ಕಟ್ಟಲು ಉದ್ದೇಶಿಸಿರುವ ಪೋಲಾವರಂ ಯೋಜನೆ ಕಾರ್ಯಗತವಾದರೆ ಪಾಪಿಕೊಂಡಲು ಬೆಟ್ಟಗಳು ನೀರಿನಲ್ಲಿ ಅರ್ಧ ಮುಳುಗುವ ಜೊತೆಗೆ 276 ಹಳ್ಳಿಗಳು ಸ್ಥಳಾಂತರಗೊಳ್ಳುವ ಆತಂಕ ಇದೆ. ಆಗ ನಿಸರ್ಗದ ಈ ಸಹಜ ಸೌಂದರ್ಯ ಇತಿಹಾಸ ಪುಟ ಸೇರಬಹುದು.

ಮಾರ್ಚ್ ಮತ್ತು ಏಪ್ರಿಲ್ ತಿಂಗಳು ಪ್ರವಾಸಕ್ಕೆ ತುಂಬ ಸೂಕ್ತ ಸಮಯ. ರಾಜಮಂಡ್ರಿಯಿಂದಲೂ ಈ ಪ್ರವಾಸಕ್ಕೆ ಅನುಕೂಲವಿದೆ. ಬೆಂಗಳೂರಿನಿಂದ ಭದ್ರಾಚಲಂಗೆ ನೇರ ಬಸ್ಸು, ರೈಲು ಅಥವಾ ವಿಮಾನ ಸಂಪರ್ಕವಿಲ್ಲ. ಹೈದರಾಬಾದನ್ನು ಕೇಂದ್ರವಾಗಿಟ್ಟುಕೊಂಡರೆ ಅಲ್ಲಿಂದ ಭದ್ರಾಚಲಂಗೆ ಬಸ್ಸಿನ ಹಾದಿ 256 ಕಿ.ಮೀ. ಭದ್ರಾಚಲಂನಿಂದ ಪೋಚಾವರಂಗೆ ಬಸ್ಸು ಅಥವಾ ಕಾರಿನಲ್ಲಿ 70 ಕಿ.ಮೀ. ಕ್ರಮಿಸಬೇಕು. ಬೆಂಗಳೂರಿನಿಂದ ರಾಜಮಂಡ್ರಿಗೆ ಬಸ್ಸಿನಲ್ಲಿ ಪ್ರಯಾಣಿಸಿದರೆ 630 ಕಿ.ಮೀ. ದೂರ. ನೇರ ರೈಲು ಸಂಪರ್ಕವೂ ಇದೆ.